


ಬೆಳಿಗ್ಗೆ ಇ–ಮೇಲ್ ಚೆಕ್ ಮಾಡಲು ಲ್ಯಾಪಿ ಹರಡಿಕೊಂಡು ಕೂತರೆ ಒಂದು ವಿಚಿತ್ರ ಮೇಲ್ ಇನ್ ಬಾಕ್ಸಿನಲ್ಲಿ ಕೂತಿತ್ತು. 'ಹೊಸಜೀವನ.ಕಾಂ' ಎನ್ನುವ ನನ್ನ ಸಂಸ್ಥೆಯ ಇ–ಮೇಲ್‌ಗೆ ಬಾರದೆ ನೇರವಾಗಿ ಅದರ ಮಾಲಕಿಯಾದ ನನಗೇ ಬಂದಿತ್ತು. ಒಂದು ತಿಂಗಳ ರಜೆಯ ಮೇಲೆ ಅಮೆರಿಕದಿಂದ ಬೆಂಗಳೂರಿಗೆ ಬಂದಿರುವ ಸಾಫ್ಟ್‌ವೇರ್ ಹುಡುಗನೊಬ್ಬ ಮದುವೆಗಾಗಿ ವಧುವೊಬ್ಬಳ ತಲಾಶಿನಲ್ಲಿರುವುದಾಗಿ ಬರೆದಿದ್ದ. ಹುಡುಗನೆಂದರೆ ಹುಡುಗನೇನಲ್ಲ. 35 ವರ್ಷದ ಗಂಡು. ಈಗಾಗಲೇ ಮೂರು ಬಾರಿ ವಿವಾಹವಾಗಿ ವಿಚ್ಛೇದಿತನೂ ಆಗಿದ್ದೇನೆ ಎಂದು ಬರೆದುಕೊಂಡಿದ್ದ. ನಮ್ಮ ಸಂಸ್ಥೆ ಇರುವುದೇ ಮರುಮದುವೆ ಮಾಡಿಸಲು. ಹಾಗಿದ್ದಾಗ್ಯೂ ಮೂರನೇ ಬಾರಿ ವಿಚ್ಛೇದಿತನಾದವನಿಗೆ ವಧುವನ್ನು ಸೂಚಿಸುವುದು ತುಸು ಆತಂಕವನ್ನೇ ಹುಟ್ಟಿಸಿತು. ಅವನ ಫೈಲ್ ಮೇಲೆ ಕಣ್ಣಾಡಿಸಿದರೆ ಪ್ರತಿಷ್ಠಿತ ಅಂತರರಾಷ್ಟ್ರೀಯ ಕಂಪೆನಿಯಲ್ಲಿ ದೊಡ್ಡ ಹುದ್ದೆಯೂ ಕೋಟಿಗಟ್ಟಲೆ ವಾರ್ಷಿಕ ವರಮಾನವೂ ಇತ್ತು. ಅವನ ಫೋಟೊದ ಜೊತೆಗೆ ಕುಟುಂಬದ ಹಿನ್ನೆಲೆಯೂ ವಿವರವಾಗಿತ್ತು. ಜಯನಗರದಲ್ಲಿರುವ ಅವನು ಓದಿದ ಕಾಲೇಜು, ಎಂಜಿನಿಯರಿಂಗ್ ಪಾಸು ಮಾಡಿದ ವರ್ಷ,